

# ಸುನ್ನತಿಯ ಸುತ್ತ...

ಧರ್ಮ, ಆಚರಣೆಗಳು ಕೆಲವರ ಶೋಷಣೆಯ ಆಯುಧಗಳಾಗಿಬಿಟ್ಟರೆ ಏನಾಗುತ್ತದೆ ಎಂಬುದನ್ನು ವಿಡಂಬನಾತ್ಮಕವಾಗಿ ಹೇಳುವ ಕಿರುಚಿತ್ರವಿದು.

■ ಗೌರಿ

ಆಧುನಿಕ ಸುಖ, ಸೌಕರ್ಯಗಳಿಗೆ ಶರಣುಹೋದ, ಆದರೆ ತಮ್ಮ ಪರಂಪರೆಯ, ಆಚರಣೆಗಳನ್ನೂ ಪೂರ್ತಿಯಾಗಿ ಬಿಟ್ಟುಕೊಡಲು ಒಪ್ಪದ ಒಂದಿಡೀ ತಲೆಮಾರೇ ಇದೆ. ಅವರಿಗೆ ತಮ್ಮ ಸಂಪ್ರದಾಯಗಳ, ಆಚರಣೆಗಳ ಅರ್ಥ ಅಥವಾ ಮಹತ್ವ ತಿಳಿದಿರುತ್ತದೆ ಎಂದಲ್ಲ. ಅದು ಎಂಥ ಬದುಕಿನ ಭಾಗವಾದಾಗ ಸಾರ್ಥಕಗೊಳ್ಳುತ್ತದೆ ಎಂಬುದರ ಬಗ್ಗೆಯೂ ಅವರಿಗೆ ಆಲೋಚನೆಯಿಲ್ಲ. ಆದರೆ ತಾನು ಅಂಥ ಪರಂಪರೆಯ ಭಾಗ ಎಂದು ಸುಲಭವಾಗಿ ಮತ್ತು ಸಾಂಕೇತಿಕವಾಗಿಯಷ್ಟೇ ಗುರ್ತಿಸಿಕೊಳ್ಳುವ ಆಸಕ್ತಿ ಇರುತ್ತದೆ. ಅಂಥವರಿಗೆ ಸುಲಭವಾಗಿ ಕಾಣುವುದು ಆಚರಣೆಗಳು. ಆಧುನಿಕತೆ ಮತ್ತು ಪರಂಪರಾಗತ ಆಚರಣೆಯ ನಡುವೆ ಸಿಲುಕಿಕೊಳ್ಳುವ ವ್ಯಕ್ತಿಯೊಬ್ಬನ ಒದ್ದಾಟವನ್ನು 'ದ ಮೋಹೆಲ್' ಕಿರುಚಿತ್ರ ಕಟ್ಟಿಕೊಡುತ್ತದೆ.

ಜೇಮ್ಸ್ ಮತ್ತು ಲೋಲಾ ಎಂಬ ಜ್ಯೂಯಿಷ್ ದಂಪತಿಗೆ ಗಂಡುಮಗು ಹುಟ್ಟಿದೆ. ಮಗುವಿಗೆ ಸುನ್ನತಿ ಮಾಡಿಸಬೇಕು ಎಂಬುದು ಜೇಮ್ಸ್ ತಾಯಿಯ ಒತ್ತಾಸೆ. ಅದಕ್ಕೆ ಜೇಮ್ಸ್ ಒಪ್ಪಿಗೆಯೂ ಇದೆ. ತಾಯಿಯ ಒತ್ತಡ ಒಂದು ಕಡೆಯಾದರೆ, ಹೆಂಡತಿ ಲೋಲಾಳ ವಾದ ಮತ್ತೊಂದು ಕಡೆಗೆ. ಜೊತೆಗೆ ತಂದೆಯಾಗಿ ಹೆಗಲೇರಿದ ಜವಾಬ್ದಾರಿಯ ಹೊರೆ ಬೇರೆ ಇದೆ. ಇಂಥ ಪರಿಸ್ಥಿತಿಯಲ್ಲಿ ಜೇಮ್ಸ್ ಮನೆಯಲ್ಲಿ ಮಗುವಿಗೆ ಸುನ್ನತಿ ಕಾರ್ಯಕ್ರಮ ಇಟ್ಟುಕೊಳ್ಳುತ್ತಾನೆ. ಅದಕ್ಕಾಗಿ ವಿಮಾನದ ಟಿಕೆಟ್, ಟ್ಯಾಕ್ಸಿ, ಸಂಭಾವನೆಗಳನ್ನು ಕೊಟ್ಟು ರಬ್ಬಿಯನ್ನೂ ಕರೆಯುತ್ತಾನೆ. ಆ ಕಾರ್ಯಕ್ರಮದಲ್ಲಿ ನಡೆಯುವ

ಹೆಸರು: ದ ಮೋಹೆಲ್ (ಇಂಗ್ಲಿಷ್)
ನಿರ್ದೇಶನ: ಚಾರ್ಲ್ಸ್ ವಾಲ್
ನಿರ್ಮಾಣ:
ಎವನ್ ಕೆಲ್ಲಿ,
ಗ್ಯಾರೆಟ್ ಪ್ಯಾಟ್ರಿಕ್
ಪಾವೊನ್
ಛಾಯಾಗ್ರಹಣ:
ಗಾಡ್‌ಫ್ರೀ ಫಿಲ್ಮ್
ಸಂಕಲನ: ಆ್ಯಮಿ
ಮಿಲ್ಕೆ
ತಾರಾಗಣ:
ಡೇನಿಯಲ್ ಮಾಸ್ಲಾನಿ ಕೀಲೆನ್; ಓಹ್ಮ್
ಸ್ಯಾಮ್; ರೋಸೆಂಥಲ್



ಘಟನೆಗಳೇ ಈ ಕಿರುಚಿತ್ರದ ಕೇಂದ್ರ.

ನೆಪಮಾತ್ರಕ್ಕೆ ಜ್ಯೂಯಿಷ್ ಆಗಿರುವ ಜೇಮ್ಸ್ ಆ ಸಮುದಾಯದ ಆಚರಣೆಗಳನ್ನೆಲ್ಲ ಅನುಸರಿಸಿಕೊಂಡು ಬಂದವನಲ್ಲ. ರಬ್ಬಿ ಹಿಬ್ರೂದಲ್ಲಿ ಮಾತಾಡಿದರೆ ಅವನಿಗದು ಬರುವುದೂ ಇಲ್ಲ. ಹಲವು ನಂಬಿಕೆಯ, ಜೀವನಶೈಲಿಯ, ಹಿನ್ನೆಲೆಯ ವ್ಯಕ್ತಿಗಳು ಮಗುವಿನ ಸುನ್ನತಿ ಹೆಸರಲ್ಲಿ ಒಂದೆಡೆ ಸೇರಿದ್ದಾರೆ. ಎಲ್ಲರಿಗೂ ಬದುಕಿನ ಬಗ್ಗೆ, ಅಲ್ಲಿ ನಡೆಯುತ್ತಿರುವ ಆಚರಣೆಗಳ ಬಗ್ಗೆ ಅವರದೇ ಆದ ನಿಲುವುಗಳಿವೆ. ಆ ನಿಲುವುಗಳಲ್ಲಿ ತೋರಿಕೆಯ ಕೃತಕತೆಯೂ ಇದೆ. ಈ ಸೂಕ್ಷ್ಮ ಸಂಗತಿಗಳನ್ನು ನಿರ್ದೇಶಕರು ಅಷ್ಟೇ ಸೂಕ್ಷ್ಮವಾಗಿ ತೋರಿಸಿದ್ದಾರೆ.

ಜೇಮ್ಸ್ ತಲೆಮೇಲೆ ಎಂದಿಗೂ ಟೋಪಿ ತೊಟ್ಟವನಲ್ಲ. ಹಾಗಾಗಿ ಕಾರ್ಯಕ್ರಮದ ಆಚರಣೆಗಾಗಿ ತೊಟ್ಟ ಟೋಪಿ ಪದೇ ಪದೇ ಬೀಳುತ್ತಿರುತ್ತದೆ. ಅವನ ಹೆಂಡತಿ ಹುಟ್ಟಾ ಜ್ಯೂಯಿಷ್ ಅಲ್ಲ, ಮತಾಂತರವಾದವಳು. ಆ ಸಂಗತಿಯೂ ಅವಳ ನಡವಳಿಕೆಯಲ್ಲಿಯೇ ರಬ್ಬಿಗೆ ತಿಳಿದುಬಿಡುತ್ತದೆ. ಇಡೀ ಕಾರ್ಯಕ್ರಮವನ್ನು ನಗುನಗುತ್ತಲೇ ನಡೆಸಿಕೊಡುವ ರಬ್ಬಿ, ಕೊನೆಯಲ್ಲಿ ಹೋಗುವಾಗ ಜೇಮ್ಸ್‌ಗೆ 'ನೀವಿಬ್ಬರೂ ಜ್ಯೂಯಿಷ್ ಬದುಕು ಬದುಕುತ್ತಿಲ್ಲ' ಎಂದು ಹೇಳಿ ಮಗುವಿಗೆ ಪ್ರಮಾಣಪತ್ರ ಕೊಡಲು ನಿರಾಕರಿಸುತ್ತಾನೆ. ಹಾಗೆ ಹೇಳುತ್ತಲೂ ಅವನಿಗೆ ಕಾಳಜಿ ಇರುವುದು ಅವನಿಗೆ ಬರಬೇಕಾದ ಸಂಭಾವನೆಯ ಬಗ್ಗೆ.

ಧರ್ಮ, ಜೀವನ ಮತ್ತು ವ್ಯಾಪಾರಗಳ ನಡುವಿನ ಸಂಬಂಧಗಳನ್ನು ನಿರ್ದೇಶಕರು ವಿಡಂಬನಾತ್ಮಕವಾಗಿ ಕಟ್ಟಿಕೊಟ್ಟಿದ್ದಾರೆ. ಆಧುನಿಕತೆಯ ಅಪಸವ್ಯಗಳಷ್ಟೇ, ಧರ್ಮ, ಆಚರಣೆಗಳು ಕೆಲವೇ ಜನರ ಕೈಯಲ್ಲಿ ಸಿಕ್ಕಿಹಾಕಿಕೊಳ್ಳುವುದರಿಂದ ಆಗುವ ಅಪಾಯದ ಕುರಿತೂ ಈ ಕಿರುಚಿತ್ರ ಮಾತಾಡುತ್ತದೆ. ಮತ್ತು ಅದನ್ನು ಎಲ್ಲಿಯೂ ವಾಚ್ಯವಾಗಿಸದೆ, ಬದುಕಿನ ಚಿತ್ರಣದೊಟ್ಟಿಗೇ ಧ್ವನಿಸಿರುವುದು ನಿರ್ದೇಶಕರ ಶಕ್ತಿಯನ್ನೂ ತೋರಿಸುತ್ತದೆ.

ಕಿರುಚಿತ್ರ ವೀಕ್ಷಣೆಗೆ https://bit.ly/3KkxKIK ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.